ದಿನಾಂಕ 16-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಪಿ ವಕೀಲರಿಂದಃ**

6. ಸಹೋದರಿಯರ ಮದುವೆಯ ಸಂಬಂಧವಾಗಿ ಮಾಡಿದ್ದ ಸಾಲಗಳು ಮತ್ತು ಬ್ಯಾಂಕಗಳಿಂದ ಪಡೆದಿದ್ದ ಸಾಲಗಳ ಮರುಪಾವತಿಗಾಗಿ 1 ನೇ ಪ್ರತಿವಾದಿಯು ದಾವಾ ಶೆಡ್ಯೂಲ್ ಎ ಸ್ವತ್ತನ್ನು 2 ನೇ ಪ್ರತಿವಾದಿಯ ಪರವಾಗಿ ಮಾರಾಟ ಮಾಡಿದ್ದನು ಎಂದರೆ ಸಾಕ್ಷಿಯು ಅದು ಖೊಟ್ಟಿ ಖರೀದಿ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಮಧ್ಯಪಾನದ ಅಭ್ಯಾಸ ಇತ್ತು ಎಂದು ವಾದ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

7. ದಾವಾ ಶೆಡ್ಯೂಲ್ ಎ ಜಮೀನನ್ನು ಖರೀದಿ ಮಾಡಿದ ನಂತರ 2 ನೇ ಪ್ರತಿವಾದಿಯು ಸಾಕಷ್ಟು ಹಣ ವ್ಯಯ ಮಾಡಿ ಅಭಿವೃದ್ದಿಪಡಿಸಿ ವ್ಯವಸಾಯ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಯಾವ ಅಭಿವೃದ್ಧಿಯನ್ನು ಮಾಡಿರುವುದಿಲ್ಲ ಅದನ್ನು ಇಂದಿಗೂ ನಾವೇ ವಹಿವಾಟು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ 2 ನೇ ಪ್ರತಿವಾದಿಯು ನೀರಾವರಿ ಸೌಲಭ್ಯವನ್ನು ಸಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಖರೀದಿ ಮಾಡಿದ ದಾವಾ ಶೆಡ್ಯೂಲ್ ಎ ಜಮೀನನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು, ಉಳಿದ ವಾದಿಯರು ಮತ್ತು ನಮ್ಮ ಸಹೋದರರು ಒಟ್ಟಿಗೆ ಮಿಲಾಪಿ ಆಗಿ ಈ ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

-12-

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಪಿ.ಸಿ.ಎಸ್ ವಕೀಲರಿಂದಃ**

ಶ್ರೀ ಪಿ.ಜಿ.ಕೆ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಕೆ ವಕೀಲರಿಂದಃ**

ಸದರಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ